## ತೀರ್ಪುಋಣಿ ವಿರುದ್ಧ ದಸ್ತಗಿರಿ ವಾರೆಂಟ್ ಹೊರಡಿಸುವುದಕ್ಕೆ ಸಂಬಂಧಿಸಿದಂತೆ ಆದೇಶ

ಡಿಕ್ರಿದಾರರು ಮೂಲ ದಾವೆ ಸಂಖ್ಯೆ -123/2019 ರಂತೆ ಹಣ ವಸೂಲಾತಿಗಾಗಿ ದಾವೆ ಸಲ್ಲಿಸಿದ್ದು, ಸದರಿ ದಾವೆ ಭಾಗಶಃ ಡಿಕ್ರಿಯಾಗಿದ್ದು, ನಂತರ ವಾದಿ / ಡಿಕ್ರಿದಾರರು ಸಕ್ಷಮ ಮೇಲ್ಮನವಿ ಸಂಖ್ಯೆ -73/2023 ರಂತೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿ ದಿನಾಂಕ 05.08.2024 ರಂದು ಪುರಸ್ಕೃತವಾಗಿರುತ್ತದೆ. ಸದರಿ ಡಿಕ್ರಿಯನ್ನು ಜಾರಿಗೊಳಿಸುವ ಸಲುವಾಗಿ ಮತ್ತು ಸದರಿ ಡಿಕ್ರಿಯಂತೆ ತೀರ್ಪುಋಣಿಯು ಹಣ ಪಾವತಿಸದೇ ಇರುವುದರಿಂದ ಹಣ ವಸೂಲಾತಿಗಾಗಿ ಈ ಅಮಲ್ಜಾರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಅಮಲ್ಜಾರಿ ಅರ್ಜಿಯನ್ನು ಸಲ್ಲಿಸಿದ ನಂತರ ತೀರ್ಪುಋಣಿಯು ತನ್ನ ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸಿದ್ದು, ತಕರಾರಿನಲ್ಲಿ ತೀರ್ಪುಋಣಿಯು ಹೃದಯ ಸಂಬಂಧಿ ಖಾಯಿಲೆಯಿಂದ ಬಳಲುತ್ತಿದ್ದು, ಡಿಕ್ರಿದಾರರಿಗೆ ಹಣ ಪಾವತಿಸಲು ಅಸಮರ್ಥರಾಗಿರುತ್ತಾರೆ ಮತ್ತು ಇವರ ಬೆಂಬಲಕ್ಕೆ ಯಾರೂ ಕೂಡ ಸಹಾಯ ಮಾಡುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

ತೀರ್ಪುಋಣಿಯ ವಿರುದ್ಧ ದಸ್ತಗಿರಿ ನೋಟಿಸ್ ಹೊರಡಿಸಲಾಗಿದ್ದು, ಸದರಿ ನೋಟೀಸ್ ಕೂಡ ಜಾರಿಯಾಗಿರುತ್ತದೆ.

ದಸ್ತಗಿರಿ ನೋಟೀಸ್ ಜಾರಿಯಾದ ನಂತರ ದಸ್ತಗಿರಿ ವಾರೆಂಟ್ ಹೊರಡಿಸಲು ಡಿಕ್ರಿದಾರರು ತನ್ನನ್ನು ವಾಸಾ-1 ಎಂದು ವಿಚಾರಣೆಗೊಳಪಟ್ಟು ನಿಶಾನೆ ಪಿ-1ರಂತೆ ದಾಖಲೆಯನ್ನು ಹಾಜರುಪಡಿಸಿರುತ್ತಾರೆ. ಡಿಕ್ರಿದಾರರು ತನ್ನ ಪ್ರಮಾಣ ಪತ್ರದಲ್ಲಿ ತಾನು ತೀರ್ಪುಋಣಿಯ ವಿರುದ್ದ ಹಣದ ವಸೂಲಾತಿ ಅರ್ಜಿಯನ್ನು ಸಲ್ಲಿಸಿದ್ದು, ತೀರ್ಪುಋಣಿಯು ಡಿಕ್ರಿಯಂತೆ ಹಣವನ್ನು ಉದ್ದೇಶಪೂರ್ವಕವಾಗಿ ಪಾವತಿಸಿರುವುದಿಲ್ಲ. ತೀರ್ಪುಋಣಿಗೆ ಸಾಕಷ್ಟು ಆದಾಯವಿದ್ದು, ನ್ಯಾಯಾಲಯದ

ಆದೇಶದಂತೆ ಹಣ ಪಾವತಿಸದೆ ತೊಂದರೆ ನೀಡುತ್ತಿದ್ದಾರೆ. ಆದ್ದರಿಂದ ಹಣ ಪಾವತಿಸುವಂತೆ ತೀರ್ಪು ಋಣಿದಾರರಿಗೆ ನಿರ್ದೇಶನ ನೀಡುವಂತೆ ಕೇಳಿಕೊಂಡಿರುತ್ತಾರೆ.

ಮಾನ್ಯ ಡಿಕ್ರಿದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

ಕಡತವನ್ನು ಪರಿಶೀಲಿಸಿದಾಗ ತೀರ್ಪುಋಣಿಯ ವಿರುದ್ಧ ಹಣ ವಸೂಲಾತಿಗಾಗಿ ಡಿಕ್ರಿಯಾಗಿದ್ದು, ಸದರಿ ಆದೇಶದಂತೆ ತೀರ್ಪುಋಣಿಯು ಹಣ ಪಾವತಿಸಿರುವುದು ಕಂಡುಬರುತ್ತಿಲ್ಲ. ಡಿಕ್ರಿದಾರರು ತನ್ನ ಪ್ರಮಾಣಪತ್ರದಲ್ಲಿ ತೀರ್ಪುಋಣಿಗೆ ಸಾಕಷ್ಟು ಆದಾಯ ಇರುತ್ತದೆ ಎಂದು ಹೇಳಿದ್ದು, ಈ ಹಂತದಲ್ಲಿ ತೀರ್ಪುಋಣಿಯ ವಿರುದ್ಧ ದಸ್ತಗಿರಿ ವಾರೆಂಟ್ ಹೊರಡಿಸುವುದು ಸೂಕ್ತವೆಂದು ಕಂಡುಬರುತ್ತದೆ. ಒಂದು ವೇಳೆ ತೀರ್ಪುಋಣಿಯ ವಿರುದ್ಧ ದಸ್ತಗಿರಿ ವಾರೆಂಟ್ ಹೊರಡಿಸದಿದ್ದಲ್ಲಿ ಡಿಕ್ರಿದಾರರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಹಾಗು ತೀರ್ಪುಋಣಿಯು ತಲೆಮರೆಸಿಕೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ ಈ ಕೆಳಕಂಡಃ-

## ಆದೇಶ

ಕಛೇರಿಯವರು ತೀರ್ಪು ಋಣಿಯ ವಿರುದ್ಧ ದಸ್ತಗಿರಿ ವಾರೆಂಟ್ ಹೊರಡಿಸತಕ್ಕದ್ದು. ಒಂದು ವೇಳೆ ದಸ್ತಗಿರಿ ಮಾಡುವ ಸಮಯದಲ್ಲಿ ತೀರ್ಪುಋಣಿಯು ಆಕ್ಷೇಪ ವ್ಯಕ್ತಪಡಿಸಿದರೆ ನ್ಯಾಯಾಲಯದ ಬೇಲಿಫ್ ರವರು ಸಂಬಂಧಪಟ್ಟ ಪೊಲೀಸ್ ಠಾಣೆಗೆ ನಿವೇದನೆ ಸಲ್ಲಿಸಿ ಪೊಲೀಸ್ ಸಹಾಯ ಪಡೆದುಕೊಳ್ಳತಕ್ಕದ್ದು.

ಈ ಬಗ್ಗೆ ಕಛೇರಿಯವರು ಸಂಬಂಧಪಟ್ಟ ಪೊಲೀಸ್ ಠಾಣೆಗೆ ಮಾಹಿತಿ ನೀಡತಕ್ಕದ್ದು.

ಪ್ರಕರಣವನ್ನು ದಿನಾಂಕ 23.02.2026 ರಂದು ಕರೆಯಿರಿ.

Prl. Civil Judge & JMFC.,
Nanjanagudu.